ಸಾಕ್ಷಿಯನ್ನು ದಿಃ 18.01.2018 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಆರ್ ಆರ್ ಎನ್ ವಕೀಲರಿಂದ

ನನ್ನ ತಾಯಿ ಭಾಗೀರಥಮ್ಮ ಇವರಿಗೆ 76 ವರ್ಷ ವಯಸ್ಸು. ಅವರಿಗೆ ಆರೋಗ್ಯ ಸರಿಯಿಲ್ಲ. ಆ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನನ್ನ ತಾಯಿ ನ್ಯಾಯಾಲಯಕ್ಕೆ ಬಂದರೆ ನಿಜಾಂಶ ಹೊರಗೆ ಬರುತ್ತದೆ ಎಂದು ಅವರ ಸಾಕ್ಷ್ಯ ನುಡಿಸಿಲ್ಲ ಅಂದರೆ ಸರಿಯಲ್ಲ. ವಾದಿ ಸಣ್ಣಮ್ಮ ದಾವಾ ಸೈಟ್ ಅವರದೆಂದು ಎಂದು ಕೇಳಿ ದಾವೆ ಹಾಕಿರುತ್ತಾರೆ. ನಾನು ಹಾಜರುಪಡಿಸಿದ ದಾಖಲೆಗಳು ಟೀಚರ್ಸ್ ಲೇಔಟ್ ನ ಸೈಟ್ ನಂಃ 7 ಕ್ಕೆ ಸಂಬಂಧಿಸಿದ್ದು ಇರುತ್ತದೆ. ದಾವಾ ಸ್ವತ್ತಿಗೂ ಟೀಚರ್ಸ್ ಲೇಔಟ್ ಗೂ ಸಂಬಂಧ ಇಲ್ಲ ಅಂದರೆ ಸರಿ. ಕ್ಯಾತಮಾನರನಹಳ್ಳಿ ಹಾಗೂ ಯರಗನಹಳ್ಳಿ ಗ್ರಾಮಗಳ ಗಡಿ ನೇರವಾಗಿ ಬರುತ್ತದೋ ಅಂಕುಡೊಂಕಾಗಿ ಬರುತ್ತದೋ ತಿಳಿದುಕೊಂಡಿಲ್ಲ. ದಾವಾ ನೋಟೀಸ್ ನನ್ನ ತಾಯಿಗೆ ಬಂದಿದ್ದರಿಂದ ದಾವೆಯ ಬಗ್ಗೆ ಗೊತ್ತಾಗಿರತ್ತದೆ. ನನ್ನ ತಾಯಿ ನನಗೆ ಅಧಿಕಾರ ಪತ್ರ ಕೊಡುವ ಪೂರ್ವದಲ್ಲಿ ದಾವಾ ಆಸ್ತಿ ಬಗ್ಗೆ ಗೊತ್ತಿತ್ತು. ಸನ್ 2003 ರಲ್ಲಿ ನನ್ನ ತಾಯಿ ಶಾಶ್ವತ ನಿರ್ಬಂಧಕಾಜ್ಞೆ ದಾವೆ ಹಾಕಿದಾಗ ಹಾಗೂ ಆಮೇಲೆ ಸನ್ 2006 ರಲ್ಲಿ ಈ ದಾವೆ ಹಾಕಿದಾಗ ಗೊತ್ತಾಗಿರುತ್ತದೆ. ಸಣ್ಣಮ್ಮನ ವಿರುದ್ಧ ನನ್ನ ತಾಯಿ ಕೇಸ್ ಹಾಕಿರಲಿಲ್ಲ ಅಂದರೆ ಸರಿ. ಸನ್ 2003 ರಲ್ಲಿ ದಾವೆ ಡಿಕ್ರಿಯಾದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ನನ್ನ ತಾಯಿ ದಾವಾಸ್ವತ್ತು ಅಂದರೆ ಸಃನಂಃ 176 ರ ಮೇಲೆ ಆಗಲೀ ಸಣ್ಣಮ್ಮನ ಮೇಲಾಗಲೀ ಕೇಸ್ ಹಾಕಿರುವುದಿಲ್ಲ ಅಂದರೆ ಸರಿ. ಸೈಟ್ ನಂಃ 7 ಯಾವ ಸರ್ವೇ ನಂಬರ್ ನಲ್ಲಿ ಬರುತ್ತದೆ ಎಂದು ಗೊತ್ತಿಲ್ಲ. ಆದರೆ ಸಃನಂಃ 54 ರಿಂದ 57 ರಲ್ಲಿ ಬರುತ್ತದೆ. ಟೈಟಲ್ ಡೀಡ್ ನಿಡಿ.62 ನ್ನು ಈ ದಾವೆ ಚಾಲ್ತಿಯಲ್ಲಿದ್ದಾಗ ಪಡೆದಿರುತ್ತೇವೆ ಅಂದರೆ ಸರಿ. ನಿಡಿ. 64 ರಲ್ಲಿ ಮುಡಾದವರು ರಸ್ತೆ ಮಾಡುವಾಗ ಚಕ್ಕುಬಂದಿ ಕುರಿತು ತಿದ್ದುಪಡಿ ಆಗಿರುತ್ತದೆ. ರಾಜ್ ಕುಮಾರ್ ರಸ್ತೆ ಪೂರ್ವ – ಪಶ್ಚಿಮ ವಾಗಿ ಇರುತ್ತದೆ. ಸದರಿ ರಸ್ತೆಯ ಪಶ್ಚಿಮಕ್ಕೆ ನಮ್ಮ ಸೈಟ್ ಬರುತ್ತದೆ. ರಾಜ್ ಕುಮಾರ್ ರಸ್ತೆ ಪೂರ್ವಕ್ಕೆ ಯರಗನಹಳ್ಳಿ ಗ್ರಾಮದ ಗಡಿ ಇದೆ ಅಂದರೆ ಸರಿಯಲ್ಲ. ರಾಜ್ ಕುಮಾರ್ ರಸ್ತೆಯ ಪಶ್ಚಿಮಕ್ಕೆ ಇರುವ ಜಾಗ ಕ್ಯಾತಮಾನರನಹಳ್ಳಿಗೆ ಸೇರಿರುತ್ತದೆ ಅಂದರೆ ಸರಿಯಲ್ಲ. ಕ್ಯಾತಮಾರನಹಳ್ಳಿ ಗ್ರಾಮದ ಸಃನಂಃ 176 ರ ಜಮೀನಿನ ಬಗ್ಗೆ ನಮ್ಮದು ತಕರಾರು ಇರುವುದಿಲ್ಲ ಅಂದರೆ ಸರಿ. ಅಸಲು ದಾವಾ ನಂಃ 671/2003 ಇದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಅಸಲು ದಾವಾ ನಂಃ 289/1996 ನ್ನು ಸಣ್ಣಮ್ಮ ಇವರು ನನ್ನ ತಾಯಿ ವಿರುದ್ಧ ಹಾಕಿದ್ದರು. ವಾದಿ ಸಣ್ಣಮ್ಮ ಈ ಹಿಂದೆ ಈ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಯಾವುದೇ ದಾವೆ ಹಾಕಿಲ್ಲ ಅಂದರೆ ಸರಿಯಲ್ಲ. ಓಎಸ್. 117/1991 ನ್ನು ಯಾರು ಹಾಕಿದ್ದರು ಎಂದು ಗೊತ್ತಿಲ್ಲ. ಸದರಿ ದಾವೆಯಲ್ಲಿ ಏನಾಯಿತೆಂದು ನನಗೆ ಗೊತ್ತಿಲ್ಲ.

ಈ ದಾವೆಯ ಬಗ್ಗೆ ನನ್ನ ತಾಯಿಯಿಂದ ಮಾಹಿತಿ ಪಡೆದಿರುತ್ತೇನೆ. ಈ ದಾವೆಯಲ್ಲಿ ನನ್ನ ತಾಯಿ ಏನು ತಕರಾರು ಸಲ್ಲಿಸಿದ್ದಾರೆಂದು ಓದಿ ತಿಳಿದುಕೊಂಡಿರುತ್ತೇನೆ. ವಾದಿಯು ದಾವಾ ಆಸ್ತಿಯ

ಮೇಲೆ ಹಕ್ಕು ಕೇಳಿರುತ್ತಾರೆ. ಯರಗನಹಳ್ಳಿ ಗ್ರಾಮದ ಜಮೀನು ಅಥವಾ ಸೈಟ್ ಮೇಲೆ ಪರಿಹಾರ ಕೇಳಿಲ್ಲ ಅಂದರೆ ಸರಿ. ಯರಗನಹಳ್ಳಿ ಗ್ರಾಮ ಹಾಗೂ ಕ್ಯಾತಮಾರನಹಳ್ಳಿ ಗ್ರಾಮದ ಗಡಿಗಳನ್ನು ಗುರುತಿಸಲು ತಕರಾರು ಇಲ್ಲ ಅಂದರೆ ಸಾಕ್ಷಿಯು ಈಗಾಗಲೇ ಸರ್ವೇ ಆಗಿದೆ ಎಂದು ಹೇಳುತ್ತಾರೆ. ಸರ್ವೇ ಆದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಹಿಂದೆ ಸರ್ವೇ ಆದಾಗ ನನ್ನ ತಾಯಿಯೊಂದಿಗೆ ನಾನು ಇದ್ದೆನು. ಸಣ್ಣಮ್ಮ ಈ ದಾವೆ ಹೊರತುಪಡಿಸಿ ಬೇರೆ ದಾವೆ ಹಾಕಿಲ್ಲ ಅಂದರೆ ಸರಿಯಲ್ಲ. ಬೇರೆಯವರು ಕೂಡ ಅವರ ವಿರುದ್ಧ ಬೇರೆ ದಾವೆ ಹಾಕಿಲ್ಲ ಅಂದರೆ ಸರಿಯಲ್ಲ. 1ನೇ ಪ್ರತಿವಾದಿಯರ ಕಚೇರಿಯವರ ಮತ್ತು ಉಳಿದ ಪ್ರತಿವಾದಿಯರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ. ಸರಿ ಇದೆ

ಸಹಿ/-

ಪ್ರಧಾನ ಲಘು ವ್ಯವಹಾರಗಳ ನ್ಯಾಯಾಧೀಶರು,
ಮತ್ತು ಎಂಎಸಿಟಿ, ಮೈಸೂರು